ಮುದುಕನಿಗೆ ಪಾಪ ಅರೆಮತ್ತು, ಯಾರಿಗೂ ಆಗುವದೇ. ಕೇಳಿದ ನನಗೇ ಹಾಗೆ ಆಗಲಿಕ್ಕೆ ಹತ್ತಿದೆ'' ಎಂದವನು ನೀರಿನ ಗ್ಲಾಸನ್ನೆತ್ತಿ ನಡದೇ ಬಿಟ್ಟ.

ಜಾಧವ ನಿದ್ದೆಯಿಂದ ಎಚ್ಚೆತ್ತವನ ಹಾಗೆ... ''ಅರೆ! ಈಗಾಗಲೇ ಆರು ಹೊಡೆಯಲು ಬಂದಿತು. ಹೇಗೂ ಬಂದೇ ಇದ್ದವನು ನಮ್ಮ ಸೋರಾಬನನ್ನು ಮಾತನಾಡಿಸಿಯೇ ಹೋಗೋಣ ಎಂದು ಕೊಂಡಿದ್ದೆ. ಇನ್ನೆಷ್ಟು ಹೊತ್ತು ಕಾಯಬೇಕಾದೀತೋ. ನಾಳೆ ನಾಡಿದ್ದು, ಇನ್ನೊಮ್ಮೆ ಬಂದಾಗ ಕಾಣುವ ಪ್ರಯತ್ನ ಮಾಡುತ್ತೇನೆ. ಬಂದಿದ್ದೆನೆಂದು ಹೇಳಲು ಮರೆಯಬೇಡಿ'' ಎನ್ನುತ್ತ ಜಾಧವ ಜಮಶೇದ–ಫ್ರೇನಿಯರಿಂದ ಬೀಳ್ಕೊಂಡ.

ಜಾಧವನಾಗಲೀ, ರಾವ್‌ಜೀಭಾಯಿಯಾಗಲೀ ಬಂದದ್ದನ್ನು ಸೋರಾಬಜೀಗೆ ಹೇಳುವುದನ್ನು ಮರೆಯುವುದು ಆ ಮನೆಯ ಒಬ್ಬರಿಗೂ ಸಾಧ್ಯವಿರಲಿಲ್ಲ. ರಾವ್‌ಜೀಭಾಯಿ ಬಂದದ್ದಂತೂ ಸೋರಾಬನನ್ನು ಕಾಣಲೆಂದೇ ಆಗಿತ್ತು. ಪ್ರತಿಯೊಬ್ಬರೂ ತಾವು ತಾವು ಕೇಳಿದ್ದನ್ನು ಅರಿತದ್ದನ್ನು ಮನಸ್ಸಿನಲ್ಲೇ ಮೆಲುಕು ಹಾಕುತ್ತ ಸೋರಾಬಜೀ–ಡಾಯನಾರ ಹಾದಿ ಕಾಯ ತೊಡಗಿದರು. ಈಗ ತಮಗಷ್ಟೇ ತಿಳಿದದ್ದನ್ನು ಅವರಿಗೂ ಮುಟ್ಟಿಸುವುದರಲ್ಲಿ ಸಮಾಧಾನವನ್ನು ಹುಡುಕುತ್ತಿದ್ದವರ ಹಾಗೆ. ಮುದುಕ–ಮುದುಕಿ ಮಾಡಲು ಬೇರೆ ಏನೂ ಕೆಲಸವಿಲ್ಲದ್ದರಿಂದ ತುಸು ಹೊತ್ತು ಅಡ್ಡವಾಗಲೆಂದು ಮಲಗುವ ಕೋಣೆಗೆ ನಡೆದರು. ಪಾರ್ವತಿ ಧೋಂಡೂ ಅಡಿಗೆ ಮನೆಯಲ್ಲಿದ್ದರು. ಧೋಂಡೂಗೆ ಕೆಳಗೆ ಹೋಗಿ ಡ್ಯೂಟಿಯ ಮೇಲಿದ್ದ ವಾಚ್‌ಮನ್–ಲಿಫ್ಟ್‌ಮನ್‌ರನ್ನು ಮಾತನಾಡಿಸುವ ಮನಸ್ಸಾಗಿತ್ತು. ಆದರೆ ಏಕೋ ಮಾತೇ ಬೇಡ ಅನ್ನಿಸಿತು. ತನ್ನ ಈವರೆಗಿನ ಆಯುಷ್ಯದಲ್ಲಿಯ ಹಲವಾರು ಘಟನೆಗಳು ಚಿತ್ರಗಳ ರೂಪದಲ್ಲಿ ಮನಸ್ಸಿನಲ್ಲಿ ಗುಂಪುಗೂಡಲು ತೊಡಗಿದಾಗ ಪಾರ್ವತಿಯ ಇದಿರಿನಲ್ಲಿ ಫಕ್ಕನೆ ಎಲ್ಲಿ ಮಾತಾಗಿ ಹೊರಗೆ ಬಂದಾವೋ ಎಂಬ ಭಯವಾಗಿ ಸೀದಾ ಬಚ್ಚಲು ಮನೆಗೆ ಹೋದ. ಬಾಲ್ದಿಯಲ್ಲಿ ನೀರು ತುಂಬಿಕೊಂಡು ಹಿಂದಿನ ಬಾಲ್ಕನಿಯೊಳಗಿನ ಗಿಡಗಳಿಗೆ ನೀರು ಹನಿಸಲು ತೊಡಗಿದ. ಬೆಳಿಗ್ಗೆ ಒಮ್ಮೆ ನೀರು ಹಾಕಿ ಮುಗಿಸಿದ ಗಿಡಗಳೇ ಇನ್ನೊಮ್ಮೆ ನೀರು ಹಾಕುವ ಕ್ರಿಯೆಯಲ್ಲಿ ತೊಡಗಿದಾಗ ಒಳಗೊಳಗೇ ಬಿಕ್ಕಳಿಸುತ್ತಿದ್ದ ಮನಸ್ಸು ತನ್ನ ಬೇಗುದಿಗೆ ಕಾರಣ ಹುಡುಕುತಿತ್ತು; ಮಗು ಕಳವಾದ ಸಂಕಟವೊಂದು, ಮರಳಿ ಸಿಕ್ಕಾಗ ಅದು ತನ್ನ ಮಗುವೇ ಎಂದು ಗುರುತು ಹಿಡಿಯಲಾಗದ ಸಂಕಟ ಇನ್ನೊಂದು. ಇವುಗಳಲ್ಲಿ ಯಾವುದು ಹೆಚ್ಚು ನೋವಿನದು? ಧೋಂಡೂ ನಿರ್ಧರಿಸದಾದ.

ಗಂಟೆ ಎಂಟಾಗುತ್ತ ಬಂದರೂ ಸೋರಾಬ–ಡಾಯನಾರ ಪತ್ತೆಯಿರಲಿಲ್ಲ. ತಾವು ತಾವೇ ಧರಿಸಿಕೊಂಡ ಮೌನ ಅಸಹನೀಯವಾಗತೊಡಗಿದಾಗ ಮನೆಯೊಳಗಿನ ನಾಲ್ಕೂ ಮಂದಿ ದಿವಾಣಖಾನೆಗೆ ಬಂದರು. ''ಇವರು ಇನ್ನೂ ಯಾಕೆ ಬರಲಿಲ್ಲವೋ?'' ಎಂದು ಮೌನ ಮುರಿದ ಮುದುಕಿ, ''ಧೋಂಡೂ, ಟೀವಿ ಹಾಕು, ಅದನ್ನಾದರೂ ನೋಡೋಣ'' ಎನ್ನುವಷ್ಟರಲ್ಲಿ ಲಿಫ್ಟ್ ಎಂಟನೇ ಮಜಲ್‌ಗೆ ಬಂದು ನಿಂತ ಸದ್ದಾಯಿತು. ಅದು ಈ ಮೊದಲು ಎಷ್ಟು ಬಾರಿ ಹೀಗೆ ನಿಂತಿದೆಯೋ! ಆದರೆ ಈ ಬಾರಿ ನಿಂತದ್ದು ಮಾತ್ರ ಸೋರಾಬ–ಡಾಯನಾ ಬಂದದ್ದರಿಂದಲೇ ಎಂದು ಖಾತ್ರಿಯಿದ್ದವನ ಹಾಗೆ ಧೋಂಡೂ ಟೀವೀ ನೋಡುವ ಲಹರಿಯನ್ನು ತುರ್ತು ತಡೆಹಿಡಿದು ಕದದ ಕಡೆಗೆ ನಡೆಯ ಹತ್ತಿದ. ಅರೆ ಕ್ಷಣದ ಮಟ್ಟಿಗೆ ಜಿಗಿದು ಬೀಳುವಂತಾಯಿತು. ಲಗುಬಗೆಯಿಂದ ಕದ ತೆರೆದ. ಒಂದು ಚಕಾರ ಶಬ್ದ ಮಾಡನಾಡದೇ ಒಳಗೆ ಕಾಲಿಟ್ಟವರು ಮೂವರಾಗಿದ್ದರು. ಸೋರಾಬ–ಡಾಯನಾರ ಜೊತೆಗೆ ಮಗ್ಗಲ ಕಟ್ಟಡದ ಗೆಳೆಯ ಮ್ಯಾಕೆಲ್